**ಕರ್ನಾಟಕ ವಿಧಾನ ಸಭೆ**
**ಸೋಮವಾರ, 26ನೇ ಮಾರ್ಚ್ 2012ರಂದು**
**ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ**
**ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 15 ನಿಮಿಷಗಳಿಗೆ**
**ಸಮಾವೇಶಗೊಂಡಿತು.**

**ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದರು.**

**ಅಧ್ಯಕ್ಷರು** : ಸಂತಾಪ ಸೂಚನೆ.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)** : ಸಂತಾಪ ಸೂಚನೆ ಆದ ಮೇಲೆ ನಾನು Adjournment motion move ಮಾಡುತ್ತೇನೆ.

**1. ಸಂತಾಪ ಸೂಚನೆ :**

**ಅಧ್ಯಕ್ಷರು** : ರಾಜ್ಯದ ಮಾಜಿ ಸಚಿವರಾಗಿದ್ದ ಶ್ರೀ ಎಂ.ವರದೇಗೌಡ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ಎಂ.ವರದೇಗೌಡ ಅವರು ದಿನಾಂಕ: 6ನೇ ಜೂನ್ 1946ರಲ್ಲಿ ಜನಿಸಿದ್ದು ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ. ದಿವಂಗತರು ವೃತ್ತಿಯಲ್ಲಿ ಕೃಷಿಕರು ಮತ್ತು ಪ್ರವೃತ್ತಿಯಲ್ಲಿ ಸಮಾಜಸೇವಕರಾಗಿದ್ದರು.

ದಿವಂಗತರು ಏಳನೇ, ಎಂಟನೇ ಮತ್ತು ಹತ್ತನೇ ವಿಧಾನಸಭೆಗೆ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ಅಲ್ಲದೆ ದಿನಾಂಕ: 21.03.1995 ರಿಂದ 05.06.1996ರವರೆಗೆ ಕರ್ನಾಟಕ ವಿಧಾನಸಭೆಯ ಸರ್ಕಾರಿ ಮುಖ್ಯ ಸಚೇತಕರಾಗಿ ಮತ್ತು ದಿನಾಂಕ: 31.05.1996 ರಿಂದ 22.07.1999ರವರೆಗೆ ರೇಷ್ಮೆ, ಉದ್ಯೋಗ ಮತ್ತು ತರಬೇತಿ, ಯೋಜನೆ, ಸಾಂಖ್ಯಿಕ ಹಾಗೂ ಸಾಂಸ್ಥಿಕ ಹಣಕಾಸು ಖಾತೆಯ ರಾಜ್ಯ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಎಂ.ವರದೇಗೌಡ ಅವರು ದಿನಾಂಕ: 24.03.2012ರಂದು ನಿಧನ ಹೊಂದಿರುತ್ತಾರೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)** : ಸನ್ಮಾನ್ಯ ಸಭಾಧ್ಯಕ್ಷರೆ, ಮಾಜಿ ಶಾಸಕರು, ಸಚಿವರು ಆಗಿದ್ದಂಥ ಸನ್ಮಾನ್ಯ ಎಂ. ವರದೇಗೌಡರು ಮಾರ್ಚ್ 24 ರಂದು ನಮ್ಮನ್ನು ಅಗಲಿದ್ದಾರೆ. ಮೂರು ಬಾರಿ ರಾಮನಗರ ಜಿಲ್ಲೆಯ ಚನ್ನಪಟ್ಟಣವನ್ನು ಪ್ರತಿನಿಧಿಸಿದ್ದರು, ಮತ್ತು ಆ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಅತ್ಯಂತ ಪ್ರಾಮಾಣಿಕವಾಗಿ ದುಡಿದಂಥ ಶಾಸಕರ ಪೈಕಿ ಅವರು ಮುಂಚೂಣಿಯಲ್ಲಿದ್ದರು ಎನ್ನುವುದನ್ನು ನಾನು ಕೇಳಿದ್ದೇನೆ. ಸರಳ, ಸಜ್ಜನ ರಾಜಕಾರಣಿ ಮತ್ತು ಜೆ.ಹೆಚ್. ಪಟೇಲರ ಸಚಿವ ಸಂಪುಟದಲ್ಲಿ ಅವರು ರೇಷ್ಮೆ ಇಲಾಖೆಯ ಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದರು ಎನ್ನುವುದನ್ನು ಕೇಳಿದ್ದೇನೆ. ಪ್ರಾಯಶಃ ಎಲ್ಲರ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಎಲ್ಲರನ್ನು ಕೂಡಾ ಪ್ರೀತಿ ವಿಶ್ವಾಸದಿಂದ ಕಾಣುವಂಥ ಒಂದು ಅಭ್ಯಾಸ ಅವರದ್ದಾಗಿತ್ತು. ನಾನೂ ಕೂಡ 2–3 ಬಾರಿ ಅವರ ಜೊತೆ ಬೇರೆ ಬೇರೆ ಸಂದರ್ಭಗಳಲ್ಲಿ ಭೇಟಿ ಮಾಡಿ ಮಾತನಾಡಿಸುವ ಅವಕಾಶ ಸಿಕ್ಕಿತ್ತು. ವರದೇಗೌಡರು ಇವತ್ತು ನಮ್ಮನ್ನು ಅಗಲಿದ್ದಾರೆ, ಒಬ್ಬ ಸಮಾಜಮುಖಿ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಂಥ ವರದೇಗೌಡರ ಅಗಲಿಕೆ ಒಂದು ತುಂಬಲಾರದ ನಷ್ಟ ಎಂದು ನಾನು ಭಾವಿಸುತ್ತೇನೆ. ಶ್ರೀಯುತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲಿ ಹಾಗೂ ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ನೀಡಲಿ ಎಂದು ಪ್ರಾರ್ಥನೆ ಮಾಡುತ್ತಾ ತಾವು ಮಂಡಿಸಿದ ಈ ಶ್ರದ್ಧಾಂಜಲಿಯ ಮಾತನ್ನು ನಾನು ಕೂಡಾ ಅನುಮೋದಿಸುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ** : ಮಾನ್ಯ ಸಭಾಧ್ಯಕ್ಷರೆ, ದಿವಂಗತ ಎಂ. ವರದೇಗೌಡರ ಸಾವಿಗೆ ಈ ಸದನ ಸಂತಾಪಸೂಚನೆ ಮಂಡಿಸಬೇಕು ಎನ್ನುವ ನಿರ್ಣಯ ತಂದಿದ್ದೀರಿ, ಆ ನಿರ್ಣಯವನ್ನು ಬೆಂಬಲಿಸುತ್ತಾ, ವರದೇಗೌಡರವರು ನನ್ನ ಜೊತೆಯಲ್ಲಿ 1983ರಲ್ಲಿ MLA ಆದವರು. ಜನತಾ ಪಾರ್ಟಿ, ಜನತಾ ದಳದಿಂದ 3 ಬಾರಿ ಶಾಸಕರಾಗಿದ್ದರು. ಜೆ.ಹೆಚ್.ಪಟೇಲ್‌ರ ಸಚಿವ ಸಂಪುಟದಲ್ಲಿ ಮಂತ್ರಿಯಾಗಿದ್ದವರು. ಬಹಳ ಒಳ್ಳೆಯ ಒಡನಾಟ ನಮ್ಮ ಜೊತೆಯಲ್ಲಿ ಇಟ್ಟುಕೊಂಡಿದ್ದವರು. ಜೆ.ಹೆಚ್. ಪಟೇಲ್‌ರವರ ಸರ್ಕಾರದಲ್ಲಿ ನಮ್ಮ ಜೊತೆ ಮಂತ್ರಿ ಕೂಡಾ ಆಗಿದ್ದರು. ರೇಷ್ಮೆ ಇಲಾಖೆ, ಉದ್ಯೋಗ, ತರಬೇತಿ, ಆರ್ಥಿಕ ಹಣಕಾಸು, Planning Minister ಆಗಿ ಜವಾಬ್ದಾರಿ ಹೊತ್ತು ಕೆಲಸ ಮಾಡಿದ್ದರು. 1996 ರಿಂದ 1999 ರವರೆಗೆ

ಮಂತ್ರಿಯಾಗಿ ರಾಜ್ಯದಲ್ಲಿ ಕೆಲಸ ಮಾಡಿದ್ದರು. ರೈತರ ಬಗ್ಗೆ ಅಪಾರವಾದ ಕಾಳಜಿಯನ್ನು ಇಟ್ಟುಕೊಂಡಿದ್ದರು. ಅವರು ಕೃಷಿಕರು. ಹಾಗಾಗಿ ರೈತರ ಬಗ್ಗೆ ಹಿತಚಿಂತನೆ, ರೈತರ ಅಭಿವೃದ್ಧಿ ಆಗಬೇಕು, ಹಳ್ಳಿಗಾಡಿನ ಅಭಿವೃದ್ಧಿಯಾಗ ಬೇಕೆಂದು ಶಾಸಕರಾಗಿ, ಚನ್ನಪಟ್ಟಣ ಕ್ಷೇತ್ರಕ್ಕೆ ಮತ್ತು ಈ ರಾಜ್ಯಕ್ಕೆ ಅಪಾರವಾದ ಸೇವೆಯನ್ನು ಮಾಡಿದ್ದಾರೆ. ಅವರದು ಒಂದು ರೀತಿಯ ಅಕಾಲ ಮರಣ ಎಂದೇ ಹೇಳಬಹುದು. 1966ರಲ್ಲಿ ಇವರು ಜನಿಸಿರುವುದು. ಹಾಗಾಗಿ 65-66 ವರ್ಷಗಳಿಗೆ ಕಾಲವಾಗಿದ್ದಾರೆ. ಅವರು ಇನ್ನೂ ಸ್ವಲ್ಪ ಕಾಲ ಇರಬೇಕಿತ್ತು. ಪಾಪ, ಇತ್ತೀಚಿನ ದಿನಗಳಲ್ಲಿ ಅವರಿಗೆ ಶಾಸಕರಾಗಲು ಚನ್ನಪಟ್ಟಣದಿಂದ ಅವಕಾಶ ಸಿಗಲಿಲ್ಲ. ಅವರು ಜೆ.ಡಿ.(ಎಸ್) ನಲ್ಲಿ ಕೊನೆಯವರೆಗೂ ಇದ್ದರು. ಅವರು ನನಗೆ ಬಹಳ ಆತ್ಮೀಯ ಸ್ನೇಹಿತರು. ಅಂತಹ ಒಬ್ಬ ಸ್ನೇಹಿತರನ್ನು ನಾವು ಕಳೆದುಕೊಂಡಿದ್ದೇವೆ. ಅವರ ನಿಧನದಿಂದ ಅವರ ಕುಟುಂಬ ವರ್ಗಕ್ಕೆ ಅಷ್ಟೇ ಅಲ್ಲದೆ ಈ ರಾಜ್ಯಕ್ಕೆ ಕೂಡಾ ನಷ್ಟವಾಗಿದೆ, ಅವರ ಕ್ಷೇತ್ರಕ್ಕೆ ನಷ್ಟವಾಗಿದೆ. ಅವರ ಕುಟುಂಬ ವರ್ಗಕ್ಕೆ ಇವತ್ತು ಬಹಳ ದುಃಖವಾಗಿದೆ. ನನಗೂ ಕೂಡಾ ವೈಕ್ತಿಕವಾಗಿ ದುಃಖವಾಗಿದೆ. ಇವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅವರ ಕುಟುಂಬ ವರ್ಗಕ್ಕೆ, ಬಂಧುಗಳಿಗೆ, ಸ್ನೇಹಿತರಿಗೆ ಎಲ್ಲರಿಗೂ ಅವರ ಸಾವಿನ ದುಃಖವನ್ನು ಭರಿಸುವ ಸಕ್ತಿ ಬರಲಿ ಎಂದು ಪ್ರಾರ್ಥನೆ ಮಾಡಿ ಅವರಿಗೆ ಗೌರವ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಂಡೆಪ್ಪ ಖಾಶೆಂಪೂರ್** : ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಧ್ವನಿಯನ್ನು ಬೆಂಬಲಿಸುತ್ತಾ, ರಾಜ್ಯದ ಮಾಜಿ ಸಚಿವರಾಗಿದ್ದ ಶ್ರೀ ಎಂ. ವರದೇಗೌಡರ ನಿಧನ ಬಹಳ ದುಃಖ ತಂದಿದೆ. ಅದರಲ್ಲೂ ವಿಶೇಷವಾಗಿ ಅವರು ನಮ್ಮ ಪಕ್ಷದ ಹಿರಿಯ ನಾಯಕರಾಗಿದ್ದರು. ಅದೂ ಅಲ್ಲದೆ, ಆ ಭಾಗದಲ್ಲಿ ನೀರಾವರಿಯಾಗಲಿ, ಬೇರೆ ಬೇರೆ ಕ್ಷೇತ್ರದಲ್ಲಿ ಬಹಳ ಹೆಸರುವಾಸಿಯಾಗಿ ತಮ್ಮದೇ ಆದ ಛಾಪನ್ನು ಬಿಟ್ಟು ಹೋದಂತಹ ವ್ಯಕ್ತಿ. ಅವರು ಮಂತ್ರಿಯಾಗಿದ್ದಾಗ ಬಹಳ ಒಳ್ಳೆಯ ರೀತಿಯಿಂದ ಕರ್ನಾಟಕ ರಾಜ್ಯಕ್ಕೆ ಸೇವೆ ಸಲ್ಲಿಸಿದ್ದಂತಹ ವ್ಯಕ್ತಿ. ಅವರು ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ. ಅವರ ಕುಟುಂಬಕ್ಕೆ ದೇವರು ಶಕ್ತಿ ಕೊಡಲಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೋರುತ್ತೇನೆ.

**ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು)** : ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ ವರದೇಗೌಡರು ನನ್ನ ತಾಲ್ಲೂಕಿನ ಒಬ್ಬ ಹಿರಿಯ ರಾಜಕಾರಣಿಯಾಗಿ ಮೂರು ಬಾರಿ ಶಾಸನ ಸಭೆಗೆ ಆಯ್ಕೆಯಾಗಿ ತಾಲ್ಲೂಕಿನಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಅವರು 1999ರಲ್ಲಿ ನಾನು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದಾಗ ನನ್ನ ವಿರುದ್ಧ ಸೋತರು. ತದನಂತರ ಅವರು ರಾಜಕೀಯ ಜೀವನದಿಂದ ದೂರ ಉಳಿದರು. ಆದರೂ ಕೂಡಾ ಹಲವಾರು ಸಂದರ್ಭಗಳಲ್ಲಿ ನನಗೆ ಮಾರ್ಗದರ್ಶನ ಮಾಡುತ್ತಿದ್ದರು. ವರದೇಗೌಡರ 60ನೇ ವರ್ಷದ ಷಷ್ಟ್ಯಬ್ದಿ ಕಾರ್ಯಕ್ರಮವನ್ನು, ನಾನು ಮತ್ತು ನನ್ನ ತಾಲ್ಲೂಕಿನ ಜನ ಅವರ ಎಲ್ಲಾ ಸಾಧನೆಗಳನ್ನು ನೆನಪಿಸಿಕೊಳ್ಳುತ್ತಾ 6 ವರ್ಷಗಳ ಹಿಂದೆ ಮಾಡಿದ್ದೇವೆ. ರಾಜಕಾರಣದಲ್ಲಿ ಯಾರೂ ಶತ್ರು ಇಲ್ಲ, ಯಾರೂ ಶಾಶ್ವತವಾದ ಮಿತ್ರರೂ ಇಲ್ಲ ಎಂದು ನಾವೆಲ್ಲರೂ ಮಾತನಾಡಿ ಕೊಳ್ಳುತ್ತೇವೆ. ಆ ರೀತಿ ವರದೇಗೌಡರೂ ಕೂಡ ನನಗೆ ರಾಜಕೀಯವಾಗಿ ವಿರುದ್ಧವಾಗಿ ಸ್ಪರ್ಧಿಸಿದ್ದರೂ ಕೂಡ ಹಲವಾರು ಬಾರಿ ನನಗೆ ಸಲಹೆ, ಸಹಕಾರಗಳನ್ನು ಕೊಡುತ್ತಿದ್ದರು. ಅದರಲ್ಲೂ ಈ ತಾಲ್ಲೂಕಿನ ನೀರಾವರಿ ಬಗ್ಗೆ ಅವರಿಗೆ ಸಾಕಷ್ಟು ಕಾಳಜಿಯಿತ್ತು. ನಾವು ಬಹಳ ಯೋಜನೆಗಳನ್ನು ಹಮ್ಮಿಕೊಂಡಿದ್ದೆವು. ಅದನ್ನು ಮಾಡಲಾಗಲಿಲ್ಲ. ನೀನು ಅದನ್ನು ಮುಂದು ವರೆಸಬೇಕೆಂದು ಯಾವಾಗಲೂ ಹೇಳುತ್ತಿದ್ದರು. ಜನಸಾಮಾನ್ಯರು ಅವರ ಬಳಿ ಹೋದಾಗ ಅವರು ನನ್ನ ಕಡೆ ಬೆರಳು ಮಾಡಿ ತೋರಿಸುತ್ತಿದ್ದರು. ಯೋಗೀಶನಿಗೆ ಹೇಳಿದ್ದೇನೆ ಹೋಗಿ, ಕೆಲಸ ಮಾಡಿಸಿಕೊಳ್ಳಿ ಎಂದು. ಅವರು ಒಬ್ಬ ಸರಳ, ಸಜ್ಜನಿಕೆಯ, ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಅದರಲ್ಲೂ ಶ್ರೀಯುತ ದೇವೇಗೌಡರನ್ನು ಬಹಳ ಹಚ್ಚಿಕೊಂಡಿದ್ದರು. ನಂತರ ಬೇಜಾರಾಗಿ ನಾನು ಕಾಂಗ್ರೆಸ್‌ನಲ್ಲಿದ್ದಾಗ ಕಾಂಗ್ರೆಸ್‌ಗೂ ಬಂದು, ಕಾಂಗ್ರೆಸ್ ಪಕ್ಷದಲ್ಲಿ ಒಂದಷ್ಟು ವರ್ಷ ಇದ್ದು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ನನ್ನ ಜೊತೆ ಕೈ ಜೋಡಿಸಿದರು. ನಂತರ ರಾಜಕೀಯದಿಂದ ವಿಮುಕ್ತರಾಗಿ ವ್ಯವಸಾಯ ಮಾಡಿಕೊಂಡು ಊರಿನಲ್ಲಿದ್ದರು. ಅವರ ಆಕಸ್ಮಿಕ ಮರಣದಿಂದಾಗ ಇಡೀ ತಾಲ್ಲೂಕಿನ ಜನ ಇವತ್ತು ಬಹಳ ದುಃಖಿತಪ್ತರಾಗಿದ್ದಾರೆ. ಹಾಗಾಗಿ ತಾವು ಮಂಡಿಸಿದ ಈ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ ಅವರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲಿ ಎಂದು ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಧ್ಯಕ್ಷರು :** ಮೃತರ ಗೌರವಾರ್ಥ ಒಂದು ನಿಮಿಷ ಮೌನಾಚರಣೆ ಆಚರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**(ಸಭೆಯಲ್ಲಿ ಒಂದು ನಿಮಿಷದ ಕಾಲ ಮೌನಾಚರಣೆ ಮಾಡಲಾಯಿತು.)**

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :** ಅಧ್ಯಕ್ಷರಲ್ಲಿ ಹಾಗೂ ವಿರೋಧ ಪಕ್ಷದ ನಾಯಕರಲ್ಲಿ ಒಂದು ವಿನಂತಿ. ಇವತ್ತು ನಮ್ಮ ಪೂರಕ ಅಂದಾಜನ್ನು ಆದ್ಯತೆಯಲ್ಲಿ ಚರ್ಚೆಗೆ ಕೈಗೆತ್ತಿಕೊಂಡು ಮುಗಿಸಿ ಕೊಡಬೇಕೆಂದು ವಿನಂತಿ.

**ಶ್ರೀ ಸಿದ್ದರಾಮಯ್ಯ :** ಬರಗಾಲದ ಬಗ್ಗೆ ಬಹಳ ಮುಖ್ಯ ಇದೆ.

**ಸಭಾಧ್ಯಕ್ಷರು :** ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳಬಹುದಾ?

**ಶ್ರೀ ಸಿದ್ದರಾಮಯ್ಯ :** ಬಹಳ important ಇದು. ಎಲ್ಲವನ್ನೂ ಮುಂದಕ್ಕೆ ಹಾಕಿ ಇದರ ಬಗ್ಗೆ ಚರ್ಚೆ ಮಾಡಬೇಕು. ಕಳೆದ ಬಾರಿ ಚರ್ಚೆ ಮಾಡುವಾಗ Blue film ನೋಡುತ್ತಿದ್ದರು. ಅದು ಹಾಗೆಯೇ ಹೊರಟು ಹೋಯಿತು. ಚರ್ಚೆನೂ ಆಗಲಿಲ್ಲ. ಸರ್ಕಾರ ಉತ್ತರನೂ ಕೊಡಲಿಲ್ಲ. ಈಗ ನಾವು ಚರ್ಚೆ ಮಾಡೋಣ ಎಂದರೆ question ಆದ ಮೇಲೆ ಎನ್ನುತ್ತೀರಿ. ಈಗ ನಾನೇನು ಹೇಳುವುದು ಎಂದರೆ question ಆದ ತಕ್ಷಣ ತೆಗೆದು ಕೊಳ್ಳುತ್ತೀರಾ?

**ಸಭಾಧ್ಯಕ್ಷರು :** ತೆಗೆದುಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ :** ಪ್ರಶ್ನೋತ್ತರ ಆದ ತಕ್ಷಣ ತೆಗೆದುಕೊಳ್ಳಬೇಕು. ಏಕೆಂದರೆ ಶಾಸಕರೆಲ್ಲಾ ನಮ್ಮ ಪ್ರಶ್ನೆಗೆ ಉತ್ತರ ಸಿಗಲಿಲ್ಲ ಎಂದು ಹೇಳುತ್ತಿದ್ದಾರೆ. ಇದಾದ ಮೇಲೆ ಪೂರಕ ಅಂದಾಜು ತೆಗೆದುಕೊಳ್ಳೋಣ. ಅದೇನು 5 ನಿಮಿಷದಲ್ಲಿ pass ಮಾಡಿಕೊಡುತ್ತೇವೆ. Its not a very big thing.

**ಶ್ರೀ ಡಿ.ವಿ. ಸದಾನಂದಗೌಡ :** ಅಲ್ಲ ನಮ್ಮ ಪ್ರತಿಪಕ್ಷದ ನಾಯಕರು ಹೇಳಿದ್ದಕ್ಕೆ ನನ್ನದು ಸಹಮತ ಇದೆ. ಬರ ಒಂದು ಗಂಭೀರವಾದ ವಿಚಾರ.

**ಶ್ರೀ ಸಿದ್ದರಾಮಯ್ಯ :** ಚರ್ಚೆ ಆಗಬೇಕು, ಮಾನ್ಯ ಅಧ್ಯಕ್ಷರೆ,

**ಶ್ರೀ ಡಿ.ವಿ. ಸದಾನಂದಗೌಡ :** ಚರ್ಚೆ ಮಾಡಲು ನಮಗೇನೂ ಅಭ್ಯಂತರವಿಲ್ಲ. ಆದರೆ ಪ್ರಶ್ನೋತ್ತರದ ನಂತರ ಅದನ್ನು ತೆಗೆದುಕೊಳ್ಳಿ.